ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 5–1–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **"30th Annual workshop of AICRP on post harvest Technology"**<br><br>**<u>Inauguration:</u>**<br><br>**Dr. K. Alagusundaram, Deputy Director General, ICAR, New Delhi.**<br><br>**<u>Note:</u> Pick up from Press Club Premises, Cubbon Park, Bengaluru at 9.30 A.M.**<br><br>**Contact:**<br><br>**Dr. L. Ramakrishna Rao, Mob No. 9986663132** | **6-1-2015 Tuesday**<br><br>**10—00 am** | **North Block Auditorium, GKVK, Bengaluru** |

| | | | |
|---|---|---|---|
| 2. | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ "ಗಾನಯಾನ".<br><br>ಉದ್ಘಾಟನೆ:<br><br>ಶ್ರೀ ವಿ. ಮನೋಹರ,<br>ಸಂಗೀತ ನಿರ್ದೇಶಕರು,<br><br>ಮುಖ್ಯ ಅತಿಥಿ:<br><br>ಶ್ರೀ ಎನ್. ಆರ್. ವಿಶುಕುಮಾರ್,<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. | 6-1-2015<br>ಮಂಗಳವಾರ<br>ಬೆಳಿಗ್ಗೆ<br>10-30 ಗಂಟೆಗೆ | ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ಯಲಹಂಕ, ಬೆಂಗಳೂರು. |
| 3 | ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ಸಭೆ<br>ಅಧ್ಯಕ್ಷತೆ:<br>ಶ್ರೀ ಎಂ.ಸಿ. ನಾಣಯ್ಯ | 6-1-2015<br>ಮಂಗಳವಾರ<br>ಬೆಳಿಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 419<br>ಸಮ್ಮೇಳನ ಸಭಾಂಗಣ,<br>ವಿಕಾಸ ಸೌಧ,<br>ನಾಲ್ಕನೇ ಮಹಡಿ<br>ಬೆಂಗಳೂರು |
| 4 | ಆರ್. ವಿ. ಇಂಜಿನೀಯರಿಂಗ್ ಕಾಲೇಜಿನ ಸುವರ್ಣ ಮಹೋತ್ಸವ.<br><br>ಮುಖ್ಯ ಅತಿಥಿ:<br>ಶ್ರೀ ಮೊಹಮ್ಮದ್ ಹಮಿದ್ ಅನ್ಸಾರಿ<br>ಉಪ ರಾಷ್ಟ್ರಪತಿಗಳು | 6-1-2015<br>ಮಂಗಳವಾರ<br>ಬೆಳಿಗ್ಗೆ<br>11-30 ಗಂಟೆಗೆ | ಆರ್.ವಿ. ಇಂಜಿನೀಯರಿಂಗ್ ಕಾಲೇಜು, ಬೆಂಗಳೂರು. |
| 5 | ಪತ್ರಿಕಾಗೋಷ್ಠಿ:<br><br>ಶ್ರೀ ಎಸ್.ಪಿ. ಷಡಾಕ್ಷರಿಸ್ವಾಮಿ,<br>ನಿರ್ದೇಶಕರು, ತೋಟಗಾರಿಕಾ ಇಲಾಖೆ | 6-1-2015<br>ಮಂಗಳವಾರ<br>ಮಧ್ಯಾಹ್ನ<br>3-00 ಗಂಟೆಗೆ | ಕಿರು ಸಭಾಂಗಣ, ತೋಟಗಾರಿಕಾ ನಿರ್ದೇಶನಾಲಯ, ಲಾಲ್‌ಬಾಗ್,<br>ಬೆಂಗಳೂರು – 560 004. |
| 6 | ಉಪ ರಾಷ್ಟ್ರಪತಿ ಶ್ರೀ ಮೊಹಮ್ಮದ್ ಹಮಿದ್ ಅನ್ಸಾರಿ ಅವರಿಂದ | 6-1-2015<br>ಮಂಗಳವಾರ<br>ಸಂಜೆ<br>5-00 ಗಂಟೆಗೆ | ವಿಪ್ರೋ ಲಿಮಿಟೆಡ್‌ಗೆ ಭೇಟಿ |
| 7. | ಉಪ ರಾಷ್ಟ್ರಪತಿ ಸನ್ಮಾನ್ಯ<br>ಶ್ರೀ ಮೊಹಮ್ಮದ್ ಹಮಿದ್ ಅನ್ಸಾರಿ ಅವರಿಂದ | 6-1-2015<br>ಮಂಗಳವಾರ<br>ಸಂಜೆ<br>6-30 ಗಂಟೆಗೆ | ಅಜೀಮ್ ಪ್ರೇಮಜೀ ಫೌಂಡೇಶನ್‌ಗೆ ಭೇಟಿ |

| | | | |
|---|---|---|---|
| ೮ | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಚಿತ್ರಕಲಾ ಪರಿಷತ್ ವತಿಯಿಂದ "ಮಾಹಿತಿ ಮನರಂಜನೆ" ಕಾರ್ಯಕ್ರಮ.<br><br>ಮಾಹಿತಿ:<br><br>ಶ್ರೀ ಬಿ.ಎಂ. ಹನೀಫ್,<br>ಹಿರಿಯ ಪತ್ರಕರ್ತರು, ಪ್ರಜಾವಾಣಿ,<br><br>ಮನರಂಜನೆ:<br><br>ಖ್ಯಾತ ಸೂಫಿ ಗಾಯಕ<br>ಶ್ರೀ ಮೀರ್ ಮುಖ್ತಿಯಾರ್ ಅಲಿ<br>ಅವರಿಂದ ಸೂಫಿ ಗಾಯನ | 6–1–2015<br>ಮಂಗಳವಾರ<br>ಸಂಜೆ<br>6–30 ಗಂಟೆಗೆ | ಕರ್ನಾಟಕ ಚಿತ್ರಕಲಾ ಪರಿಷತ್,<br>ಕುಮಾರಕೃಪಾ ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

## ವರ್ಗಾವಣೆ

ಬೆಂಗಳೂರು, ಜನವರಿ ೫ (ಕರ್ನಾಟಕ ವಾರ್ತೆ)

ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಎನ್. ನಾಗಾಂಬಿಕಾ ದೇವಿ ಅವರಿಗೆ ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹುದ್ದೆಯ ಸಮವರ್ತಿತ ಪ್ರಭಾರ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರನ್ನು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹುದ್ದೆಯ ಅಧಿಕ ಪ್ರಭಾರದಿಂದ ಬಿಡುಗಡೆಗೊಳಸಲಾಗಿದೆ ಎಂದು ಸರ್ಕಾರದ ಅಧಿಸೂಚನೆಯಲ್ಲಿ ತಿಳಸಲಾಗಿದೆ.

ಪಹೊ:ಬಾಬು:ಜಿಪಿಆರ್

## ಕಾರ್ಮಿಕ ಕಲ್ಯಾಣ ನಿಧಿ : ವಂತಿಕೆ ಕಡ್ಡಾಯವಾಗಿ ಪಾವತಿಸಿ

ಬೆಂಗಳೂರು, ಜನವರಿ ೫ (ಕರ್ನಾಟಕ ವಾರ್ತೆ)

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಕಾರ್ಯಗಾರಗಳು, ಮೋಟಾರು ವಾಹನ ಸಂಸ್ಥೆಗಳ ಮಾಲೀಕ ವರ್ಗದವರು ನೇಮಿಸಿಕೊಂಡಿರುವ, ವೇತನ ಪಡೆಯುತ್ತಿರುವ ಪ್ರತಿ ಸಿಬ್ಬಂದಿ, ನೌಕರರ ವಂತಿಕೆ ರೂ 6/- ಹಾಗೂ ಮಾಲೀಕರ ವಂತಿಕೆ ರೂ 12/- ರಂತೆ ಪ್ರತಿ ಸಿಬ್ಬಂದಿಗೆ ಒಟ್ಟು ರೂ 18/- ರಂತೆ ವಂತಿಕೆಯನ್ನು ಫಾರಂ 'ಡಿ' ನಮೂನೆಯೊಂದಿಗೆ ಕಡ್ಡಾಯವಾಗಿ ಪಾವತಿಸಬೇಕು ಎಂದು ಕಾರ್ಮಿಕ ಕಲ್ಯಾಣ ಮಂಡಳಿ ಆಯುಕ್ತರು ತಿಳಿಸಿದ್ದಾರೆ.

50 ಮತ್ತು ಅದಕ್ಕಿಂತ ಹೆಚ್ಚಿನ ನೌಕರರನ್ನು (ಮೇಲ್ವಿಚಾರಣೆ ಕೆಲಸ ಮಾಡುವ ನುರಿತ ನೌಕರರೂ ಹಾಗೂ ಆಡಳಿತ ವರ್ಗದ ನೌಕರರೂ ಸೇರಿದಂತೆ) ನೇಮಿಸಿಕೊಂಡ ಎಲ್ಲಾ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಚಾರಿಟಬಲ್ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಅಡಿಯಲ್ಲಿ ನೋಂದಣಿಯಾದ ಎಲ್ಲಾ ಸಂಘ ಸಂಸ್ಥೆಗಳ ಮಾಲೀಕ ವರ್ಗದವರು ಕಡ್ಡಾಯವಾಗಿ ಮೇಲೆ ತಿಳಿಸಿರುವ ದರಗಳಂತೆ ಕಾರ್ಮಿಕ ಮತ್ತು ಮಾಲೀಕರ ವಂತಿಗೆಯನ್ನು ಪಾವತಿಸಬೇಕು.

ಕಾರ್ಮಿಕರಿಗೆ ಪಾವತಿಯಾಗದೇ ಇರುವ ಬಾಕಿ ವೇತನ ಹಾಗೂ ಇತರೆ ಭತ್ಯೆಗಳು, ಬೋನಸ್ ಮತ್ತು ದಂಡದ ರೂಪದಲ್ಲಿ ವಸೂಲು ಮಾಡಿ ಸಂಗ್ರಹಿಸಿರುವ ಮೊತ್ತಗಳನ್ನು ಸ್ಟೇಟ್ ಬ್ಯಾಂಕ್ ಇಂಡಿಯಾ, ನಂ 48, ಮತ್ತಿಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು -560 022 ಇಲ್ಲಿ ಕಲ್ಯಾಣ ಆಯುಕ್ತರ ಹೆಸರಿನಲ್ಲಿ ತೆರೆದಿರುವ ಅನ್‌ಕ್ಲೇಮ್ಡ್ ಖಾತೆ ಸಂಖ್ಯೆ: 32917895845 ಕ್ಕೆ ಚೆಕ್/ಡಿ.ಡಿ. ರೂಪದಲ್ಲಿ ಪಾವತಿಸಿ ಸಂಬಂಧಿಸಿದ ಪತ್ರವನ್ನು (ನೌಕರರ ಪಟ್ಟಿ ಸೇರಿದಂತೆ) ಕರ್ನಾಟಕ ಕಾರ್ಮಿಕ ಕಲ್ಯಾಣ ಭವನ, ನಂ. 48, 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, (ಆರ್.ಟಿ.ಓ. ಕಚೇರಿ ಹತ್ತಿರ) ಯಶವಂತಪುರ, ಬೆಂಗಳೂರು – 22" ಕಡ್ಡಾಯವಾಗಿ ಸಲ್ಲಿಸಬೇಕು.

ವಿಳಂಬವಾಗಿ ಪಾವತಿಸುವ ಮಾಲೀಕ ವರ್ಗದವರು ವಂತಿಗೆ ಮೊತ್ತ ಹಾಗೂ ಕಾರ್ಮಿಕರಿಗೆ ಪಾವತಿ ಮಾಡದೆ ಇರುವ ಮೊತ್ತಗಳ ಅನುಗುಣವಾಗಿ ಶೇಕಡ 18 ರಂತೆ ಬಡ್ಡಿ ತೆರಬೇಕಾಗುತ್ತದೆ. ಉಲ್ಲಂಘನೆ ಮಾಡಿದ ಮಾಲೀಕರ ವಿರುದ್ಧ ಮೊಕದ್ದಮ್ಮೆಗಳನ್ನು ಹೂಡಲಾಗುವುದಲ್ಲದೆ, ಪ್ರತಿ ಉಲ್ಲಂಘನೆಗೆ ಕನಿಷ್ಠ ರೂ 500/- ರಿಂದ 1000/- ದಂಡ ವಿಧಿಸಲು ಹಾಗೂ ಮೂರು ತಿಂಗಳಿಂದ ಒಂದು ವರ್ಷದವರೆವಿಗೂ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಪಾವತಿಸಬೇಕಾದ ವಂತಿಗೆ ಮೊತ್ತವನ್ನು 15 ನೇ ಜನವರಿ 2015 ರೊಳಗೆ WelfareCommissioner,Bangalore ಇವರ ವಂತಿಕೆ ಖಾತೆ ಸಂಖ್ಯೆ: 30428019173 ಕ್ಕೆ ಸ್ಟೇಟ್ ಬ್ಯಾಂಕ್ ಇಂಡಿಯಾ, ನಂ 48, ಮತ್ತಿಕೆರೆ ಮುಖ್ಯ ರಸ್ತೆ, ಯಶವಂತಪುರ, ಬೆಂಗಳೂರು -560 022 ಇಲ್ಲಿಗೆ ನೇರವಾಗಿ ಚೆಕ್/ಡಿ.ಡಿ/ಆರ್‌ಟಿಜಿಎಸ್/ಎನ್‌ಇಎಫ್‌ಟಿ ಮೂಲಕ ಪಾವತಿಸಲು ಕೋರಲಾಗಿದೆ ಹಾಗೂ ಕಲ್ಯಾಣ ಆಯುಕ್ತರ ಕಚೇರಿಗೆ , ಹಣ ಸಂದಾಯ ಮಾಡಿದ ರಶೀದಿ ಮತ್ತು ಫಾರಂ-'ಡಿ' ಯನ್ನು ಕಡ್ಡಾಯವಾಗಿ

ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ ( 080–23570266 ಅಥವಾ www.klwb.kar.com ನ್ನು ಸಂಪರ್ಕಿಸಬಹುದು.

ಬಾಬು:ಜಿಪಿಆರ್.

## ಬೆಂಗಳೂರು ಭೇಟಿಗೆ ಆಗಮಿಸಿದ ಉಪ ರಾಷ್ಟ್ರಪತಿ

**ಬೆಂಗಳೂರು, ಜನವರಿ ೫ (ಕರ್ನಾಟಕ ವಾರ್ತೆ)**

ಬೆಂಗಳೂರಿಗೆ ಮೂರು ದಿನಗಳ ಭೇಟಿ ಕೈಗೊಂಡಿರುವ ಘನತೆವೆತ್ತ ಭಾರತದ ಉಪ ರಾಷ್ಟ್ರಪತಿ ಶ್ರೀ ಮೊಹಮ್ಮದ ಹಮಿದ್ ಅನ್ಸಾರಿ ಅವರು ಇಂದು ಮಧ್ಯಾಹ್ನ 1–10 ಗಂಟೆಗೆ ಹೆಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಲುವಾಗಿ ಪತ್ನಿ ಶ್ರೀಮತಿ ಸಲ್ಮಾ ಅನ್ಸಾರಿ ಅವರೊಂದಿಗೆ ಆಗಮಿಸಿದ ಅವರನ್ನು ಘನತೆವೆತ್ತ ರಾಜ್ಯಪಾಲರಾದ ಶ್ರೀ ವಾಜೂಬಾಯ್ ವಾಲಾ ಅವರು ದಂಪತಿಗಳಿಬ್ಬರಿಗೂ ಪುಷ್ಪಗುಚ್ಛವನ್ನು ನೀಡಿ ಸ್ವಾಗತಿಸಿದರು.

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಅನ್ಸಾರಿ ಅವರಿಗೆ ಮೈಸೂರು ಪೇಟತೊಡಿಸಿ ಶ್ರೀಗಂಧದ ಹಾರವನ್ನು ಹಾಕಿ ಸ್ವಾಗತಿಸಿದರು. ವಾರ್ತಾ ಸಚಿವರಾದ ಶ್ರೀ ರೋಷನ್ ಬೇಗ್, ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಶಾಂತಕುಮಾರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೌಶಿಕ್ ಮುಖರ್ಜಿ, ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಶ್ರೀ ಎಂ.ಎನ್. ರೆಡ್ಡಿ, ಜಂಟಿ ಆಯುಕ್ತರಾದ ಶ್ರೀ ಅಲೋಕ್ ಕುಮಾರ್, ಡಿ.ಸಿ.ಪಿ. ರೋಹಿಣಿ ಅವರು ಸೇರಿದಂತೆ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಬಾಬು:ಜಿಪಿಆರ್.

## ರಾಜ್ಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿ ಸಮೀಕ್ಷೆ ಕಾರ್ಯ : ಹೆಚ್. ಆಂಜನೇಯ

**ಬೆಂಗಳೂರು, ಜನವರಿ ೫ (ಕರ್ನಾಟಕ ವಾರ್ತೆ)**

ರಾಜ್ಯದ ಜನರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವ ಸಂಬಂಧ ಏಪ್ರಿಲ್ 11 ರಿಂದ 30 ರವರೆಗೆ ಜಾತಿ ಗಣತಿ ಸಮೀಕ್ಷೆ ನಡೆಯಲಿದೆ ಎಂದು ಸಮಾಜ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಇಂದು ವಿಧಾನಸೌಧದಲ್ಲಿ ಏರ್ಪಡಿಸಿದ ಸಭೆಯ ನಂತರ ಸುದ್ದಿಗಾರರೊಂದಿಗೆ

ಮಾತನಾಡಿದ ಸಚಿವರು ಈ ಸಮೀಕ್ಷೆ ಕಾರ್ಯವು ಇಪ್ಪತ್ತು ದಿನಗಳ ಕಾಲ ನಡೆಯಲಿದ್ದು ಎರಡು ತಿಂಗಳಲ್ಲಿ ಸಂಪೂರ್ಣ ವರದಿಯನ್ನು ಸಿದ್ಧಪಡಿಸಲಾಗುವುದು ಎಂದರು.

ಸಂವಿಧಾನದಲ್ಲಿರುವ ಆಶಯವನ್ನು ಸಾಕಾರಗೊಳಿಸುವ ಉದ್ದೇಶದಿಂದ ಈ ಸಮೀಕ್ಷೆಯನ್ನು ನಡೆಸಲಾಗುತ್ತಿದೆ ಎಂದ ಸಚಿವರು ರಾಜ್ಯದಲ್ಲಿರುವ ಪ್ರತಿ ಮನೆಗೆ ಭೇಟಿನೀಡಿ ನಿವಾಸಿಗಳ ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುವುದು ಎಂದರು.

ಈ ಸಮೀಕ್ಷೆ ಕಾರ್ಯಕ್ಕೆ ಸುಮಾರು 175 ಕೋಟಿ ರೂ. ಖರ್ಚು ಆಗಲಿದೆ. ಗಣತಿ ಕಾರ್ಯದಲ್ಲಿ 1.33 ಲಕ್ಷ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರು ಕರ್ತವ್ಯ ನಿರ್ವಹಿಸಲಿದ್ದಾರೆ ಎಂದ ಸಚಿವರು ರಾಜ್ಯದಲ್ಲಿ 1.28 ಕೋಟಿ ಅಂದಾಜು ಕುಟುಂಬಗಳಿದ್ದು, 6.35 ಕೋಟಿ ಜನಸಂಖ್ಯೆ ಇದೆ ಎಂದರು.

ಸಮೀಕ್ಷೆ ಕಾರ್ಯದ ನೇತೃತ್ವವನ್ನು 30 ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಆಯುಕ್ತರು, ಮಹಾನಗರಪಾಲಿಕೆಗಳ ಜಂಟಿ ಆಯುಕ್ತರು, 10 ಮಹಾನಗರಪಾಲಿಕೆಗಳ ಆಯುಕ್ತರು, ಸೇರಿದಂತೆ ಈ ಸಮೀಕ್ಷೆ ಕಾರ್ಯದಲ್ಲಿ ಒಟ್ಟು 1.75 ಲಕ್ಷ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಗಣತಿ ಕಾರ್ಯದ ಪೂರ್ವಭಾವಿ ಪ್ರಕ್ರಿಯೆಗಳು ನಾಳೆಯಿಂದಲೇ ಪ್ರಾರಂಭವಾಗಲಿದೆ ಎಂದು ಅವರು ತಿಳಿಸಿದರು.

ಪಹೋ:ಕೆಪಿಪಿ:ಸೌಮ್ಯ:ಜಿಪಿಆರ್.

## ವಿಜ್ಞಾನ ವಿಷಯಗಳಲ್ಲಿ ಹೆಚ್ಚು ಸಂಶೋಧನೆಗಳು ನಡೆಯಲಿ: ಉಪರಾಷ್ಟ್ರಪತಿ ಅನ್ಸಾರಿ

**ಬೆಂಗಳೂರು, ಜನವರಿ 5 (ಕರ್ನಾಟಕ ವಾರ್ತೆ)**

ಭಾರತದ ಮುಂದಿನ ಭವಿಷ್ಯ ವಿಜ್ಞಾನಕ್ಕೆ ಮೀಸಲಿದ್ದು ಈ ಕ್ಷೇತ್ರದಲ್ಲಿ ಹೊಸ ಸಂಶೋಧನೆ ಹಾಗೂ ಬೆಳವಣಿಗೆ ನಡೆಯಬೇಕಿದೆ ಎಂದು ಭಾರತದ ಉಪರಾಷ್ಟ್ರಪತಿ ಮೊಹಮ್ಮದ್ ಹಮೀದ್ ಅನ್ಸಾರಿ ತಿಳಿಸಿದರು.

ಅವರು ಇಂದು ಜವಾಹರ್‌ಲಾಲ್ ನೆಹರು ವೈಜ್ಞಾನಿಕ ಸಂಶೋಧನಾ ಕೇಂದ್ರದ ಬೆಳ್ಳಿ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ವಿವಿಧ ದೇಶಗಳು ತಂತ್ರಜ್ಞಾನದಲ್ಲಿ ಭಾರತಕ್ಕಿಂತ ಮುಂದಿದೆ. ಇಲ್ಲಿನ ಕೈಗಾರಿಕೆ ಇನ್ನೂ ಹೆಚ್ಚು ಅಭಿವೃದ್ಧಿ ಹೊಂದಬೇಕಿದೆ ಭಾರತದ ಮಾಜಿ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು ತಿಳಿಸಿದಂತೆ ಯಾವಾಗ ವಿಜ್ಞಾನವು ಬಡತನ ನಿರ್ಮೂಲನೆ, ಜನರ ಜೀವನ ಮಟ್ಟ ಸುಧಾರಣೆ ಮಾಡುತ್ತದೆಯೋ ಆಗ ದೇಶ ಮುನ್ನಡೆಯುತ್ತದೆ. ನಾವು ವಿಜ್ಞಾನದಲ್ಲಿ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಬೇಕು. ಇಂದಿನ ಯುವ ಜನರಲ್ಲಿ ವಿಜ್ಞಾನದಲ್ಲಿ ಹೆಚ್ಚಿನ ಉದ್ಯೋಗವಕಾಶ ಸಿಗಬೇಕು ಹಾಗೂ ಹೆಚ್ಚು ಸಂಶೋಧನೆ ನಡೆಯಬೇಕು.

ಭಾರತದ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣದ ಗುಣಮಟ್ಟ ಹೆಚ್ಚಿ ಜಗತ್ತಿನ 50 ಉತ್ತಮ ಸಂಸ್ಥೆಗಳಲ್ಲಿ ಸ್ಥಾನ ಪಡೆಯಬೇಕು ಎಂದರು.

ಕರ್ನಾಟಕ ರಾಜ್ಯಪಾಲ ವಜುಭಾಯಿ ರೂಢಬಾಯಿ ವಾಲಾ ಅವರು ಮಾತನಾಡಿ ವಿಜ್ಞಾನವು ಪ್ರತಿದಿನ ಬೆಳವಣಿಗೆ ಹೊಂದುತ್ತಿದೆ. ಇಸ್ರೋ ವಿಜ್ಞಾನಿಗಳು ಕಳೆದ ವರ್ಷ ಮಂಗಳಯಾನವನ್ನು ಯಶಸ್ವಿಯಾಗಿ ನಡೆಸಿದರು. ಇಂದು ಮಹಿಳೆಯರು ಸಹಾ ಹೆಚ್ಚು ಬುದ್ಧಿವಂತಿಕೆ ಹಾಗೂ ಸಮರ್ಥರಾಗಿ ವಿಜ್ಞಾನದ ವಿಷಯದಲ್ಲಿ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರವು ಸೌರಶಕ್ತಿ, ತ್ಯಾಜ್ಯ ನಿರ್ವಹಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಮುಂತಾದ ವಿಷಯಗಳಲ್ಲಿ ಹೆಚ್ಚು ಸಾಧನೆ ಮಾಡಿದೆ. ನ್ಯಾನೊ ತಂತ್ರಜ್ಞಾನಕ್ಕೆ ಇಂದು ಪ್ರಾಮುಖ್ಯತೆ ನೀಡಲಾಗಿದೆ. ಭಾರತ ರತ್ನ ಸಿ. ಎನ್.ಆರ್. ಅವರು ಜವಹರ್‌ಲಾಲ್ ಸಂಶೋಧನಾ ಕೇಂದ್ರವನ್ನು ವಿಶ್ವ ಮಟ್ಟದಲ್ಲಿ ಗುರುತಿಸಲು ಶ್ರಮಿಸಿದ್ದಾರೆ ಎಂದರು. ಅವರು ಈ ಸಂದರ್ಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಹಿರಿಯ ವಿಜ್ಞಾನಿ ಭಾರತರತ್ನ ಪ್ರೊ ಸಿ.ಎನ್.ಆರ್. ರಾವ್ ಅವರು ಈ ಸಂಸ್ಥೆಯು 1994 ರಿಂದಲೂ ಸಂಶೋಧನ ಕಾರ್ಯಗಳಲ್ಲಿ ತೊಡಗಿದೆ ಇಲ್ಲಿ ಗುಣಮಟ್ಟದ ಸಂಶೋಧನೆಗಳನ್ನು ವಿದ್ಯಾರ್ಥಿಗಳು ಕೈಗೊಂಡಿದ್ದಾರೆ. ಇಂದು ವಿಜ್ಞಾನವು ನೂತನ ಆವಿಷ್ಕಾರವನ್ನು ಹೊಂದುತ್ತಿರುವ ಸಂದರ್ಭದಲ್ಲಿ ಸಂಶೋಧನೆ ಹಾಗೂ ಹೊಸ ವಿಷಯಗಳ ಕುರಿತು ಪುಸ್ತಕ ಪ್ರಕಟಣೆ ನಡೆಯಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ: ಪಿ. ರಾಮರಾವ್, ದೆಹಲಿಯ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ ಕಾರ್ಯದರ್ಶಿಗಳಾದ ಪ್ರೊ ಕೆ. ವಿಜಯ ರಾಘವನ್ ಮುಂತಾದವರು ಉಪಸ್ಥಿತರಿದ್ದರು.

ಪಹೊ/ಕವನ

ಛಾಯಾಚಿತ್ರ ಶೀರ್ಷಿಕೆ:

NRP 3910, NRP 3945

ಇಂದು ಬೆಂಗಳೂರಿನ ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜು ಆವರಣದಲ್ಲಿ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಿದ್ದ ಕನ್ನಡ ಚಲನಚಿತ್ರ ಸಂಗೀತ ನಡೆದು ಬಂದ ಮಧುರ ನೆನಪು ಗಾನಯಾನ ಕಾರ್ಯಕ್ರಮವನ್ನು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ಉದ್ಘಾಟಿಸಿದರು. ಕರ್ನಾಟಕ ಚಲನಚಿತ್ರ ಅಕಾಡೆಮಿ

ಅಧ್ಯಕ್ಷ ಶ್ರೀ ರಾಜೇಂದ್ರಸಿಂಗ್ ಬಾಬು, ಇಲಾಖೆಯ ನಿರ್ದೇಶಕ ಶ್ರೀ ಎನ್.ಆರ್. ವಿಶುಕುಮಾರ್ ಸಂಗೀತ ನಿರ್ದೇಶಕ ಶ್ರೀ ಹಂಸಲೇಖ ಹಾಗೂ ಕಾಲೇಜಿನ ಪ್ರಾಂಶುಪಾಲ ಶ್ರೀ ರವಿಕುಮಾರ್ ಚಿತ್ರದಲ್ಲಿದ್ದಾರೆ.

Vice President:

ಇಂದು ಬೆಂಗಳೂರಿಗೆ ಉಪ ರಾಷ್ಟ್ರಪತಿ ಶ್ರೀ ಮೊಹಮ್ಮದ್ ಹಮಿದ್ ಅನ್ಸಾರಿ ಅವರು ಆಗಮಿಸಿದರು. ಹೆಚ್.ಎ.ಎಲ್. ವಿಮಾನ ನಿಲ್ದಾಣದಲ್ಲಿ ಉಪ ರಾಷ್ಟ್ರಪತಿಗಳನ್ನು ರಾಜ್ಯದ ರಾಜ್ಯಪಾಲ ಶ್ರೀ ವಜುಭಾಯಿ ರೂಢಭಾಯಿ ವಾಲಾ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಜ್ ಖಾತೆ ಸಚಿವ ಶ್ರೀ ಆರ್. ರೋಷನ್ ಬೇಗ್ ಹಾಗೂ ರಾಜ್ಯಸಭಾ ಸದಸ್ಯ ಶ್ರೀ ಕೆ. ರೆಹಮಾನ್ ಖಾನ್ ವಿಮಾನ ನಿಲ್ದಾಣದಲ್ಲಿ ಉಪ ರಾಷ್ಟ್ರಪತಿಗಳನ್ನು ಬರಮಾಡಿಕೊಂಡರು.